## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 448 (593) |
| 2 | ಸದಸ್ಯರ ಹೆಸರು | : | ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಇರುವ ಒಟ್ಟು ಆಸ್ತಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲಾಗಿದೆ; ಇವುಗಳಲ್ಲಿ ಬಿ ಖಾತೆಗಳ ಸಂಖ್ಯೆ ಎಷ್ಟು; ಎಲ್ಲಾ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | • ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಸ್ತಿ ತೆರಿಗೆ ವ್ಯಾಪ್ತಿಯಲ್ಲಿರುವ ಒಟ್ಟು ಆಸ್ತಿಗಳ ಸಂಖ್ಯೆ ಹಾಗೂ ಬಿ-ಖಾತೆ ಆಸ್ತಿಗಳ ಸಂಖ್ಯೆಯ ವಿವರವನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ.<br>• ತೆರಿಗೆ ವ್ಯಾಪ್ತಿಗೆ ಇನ್ನೂ ಸೇರ್ಪಡೆಯಾಗದ ಆಸ್ತಿಗಳನ್ನು ಗುರುತಿಸಿ ಆಸ್ತಿ ತೆರಿಗೆ ವ್ಯಾಪ್ತಿಗೆ ತರುವ ಉದ್ದೇಶದಿಂದ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಅವುಗಳಲ್ಲಿ, ಏಕ ನಿವೇಶನ (Single Plot) ಅನುಮೋದನೆಯ ಆಧಾರದ ಮೇಲೆ ಹೊಸ ಖಾತೆ/ಎ-ಖಾತೆ ನೀಡುವುದು, ಸಿಬ್ಬಂದಿಯಿಂದ ಮನೆ-ಮನೆ ಸಮೀಕ್ಷೆ (Door-to-Door Survey) ನಡೆಸುವುದು ಹಾಗೂ ಟರ್ನ್‌ಕೀ (Turnkey) ಆಧಾರದ ಮೇಲೆ ವಿಶೇಷ ಸಂಸ್ಥೆಗಳನ್ನು ನಿಯೋಜಿಸಿ ತೆರಿಗೆ ವ್ಯಾಪ್ತಿಗೆ ಹೊರಗಿರುವ ಆಸ್ತಿಗಳನ್ನು ಗುರುತಿಸಿ ನೋಂದಾಯಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. |
| ಆ) | ಬಿ ಖಾತಾ ಇಂದ ಎ ಖಾತೆಗೆ ಪರಿವರ್ತನೆಗೆ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು; ಅರ್ಜಿ ಶುಲ್ಕ ಹೆಚ್ಚಾಗಿರುವ ಕಾರಣ ಜನರು ನೀರಸ ಪ್ರತಿಕ್ರಿಯೆ ತೋರುತ್ತಿದ್ದು, ಅರ್ಜಿ ಶುಲ್ಕ ಕಡಿಮೆ ಮಾಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ; | • ಬಿ-ಖಾತೆಯಿಂದ ಎ-ಖಾತೆಗೆ ಪರಿವರ್ತನೆಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆಯ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br>• ಪರಿವರ್ತನೆ ಶುಲ್ಕಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಬಂದಿರುವ ಮನವಿಗಳನ್ನು ಪರಿಶೀಲಿಸಿ, ಅದರಂತೆ ಏಕ ನಿವೇಶನ ಅನುಮೋದನೆ (Single Plot Approval) ಶುಲ್ಕವನ್ನು ಮಾರ್ಗಸೂಚಿ ಮೌಲ್ಯದ (Guidance Value) 5% ರಿಂದ 2%ಕ್ಕೆ ಇಳಿಸಲಾಗಿದೆ. |
| ಇ) | ಶೇಖಡ 5% ರಷ್ಟು ಶುಲ್ಕ ಪಾವತಿ ಮಾಡಿ ಬಿ ಖಾತೆಯಿಂದ ಎ ಖಾತೆಗೆ ಪರಿವರ್ತನೆ ಮಾಡಿಕೊಂಡ ಆಸ್ತಿ ಮಾಲೀಕರ ಸಂಖ್ಯೆ ಎಷ್ಟು; ಪ್ರಸ್ತುತ 2% ಪರ್ಸೆಂಟ್ ಇಳಿಸಿರುವ ಕಾರಣ ಈ ಹಿಂದೆ 5% ಪಾವತಿಸಿರುವ ಹಣದಲ್ಲಿ ಹೆಚ್ಚುವರಿ ಆದ 3% ಪರ್ಸೆಂಟ್ ಹಿಂತಿರುಗಿಸಲಾಗುವುದೇ;<br>ಹಿಂತಿರುಗಿಸುವುದಾದರೆ ಯಾವ ಕಾಲಮಿತಿಯಲ್ಲಿ ಹಿಂತಿರುಗಿಸಲಾಗುವುದು; | • ಮಾರ್ಗಸೂಚಿ ಮೌಲ್ಯದ (Guidance Value) ಶೇ. 5ರ ದರದಲ್ಲಿ ಹಾಗೂ ಶೇ. 2ರ ದರದಲ್ಲಿ ಏಕ ನಿವೇಶನ ಅನುಮೋದನೆ ಶುಲ್ಕವನ್ನು ಪಾವತಿಸಿ ಬಿ-ಖಾತೆಯಿಂದ ಎ-ಖಾತೆಗೆ ಪರಿವರ್ತನೆ ಮಾಡಿಕೊಂಡಿರುವ ಆಸ್ತಿಗಳ ಸಂಖ್ಯೆಯ ವಿವರವನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.<br>• ಪ್ರಸ್ತುತ ಏಕ ನಿವೇಶನ ಅನುಮೋದನೆ ಶುಲ್ಕವನ್ನು ಮಾರ್ಗಸೂಚಿ ಮೌಲ್ಯದ ಶೇ. 5ರಿಂದ ಶೇ. 2ಕ್ಕೆ ಇಳಿಸಲಾಗಿದೆ. ಈ ಹಿಂದೆ ಶೇ. 5ರ ದರದಲ್ಲಿ ಶುಲ್ಕ ಪಾವತಿಸಿರುವ ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಶೇ. 3ರ ಮೊತ್ತವನ್ನು ಮರುಪಾವತಿಸುವ ಬಗ್ಗೆ ಪ್ರಸ್ತಾವವಿರುವುದಿಲ್ಲ. |

...2...

| | | |
|---|---|---|
| ಈ) | ಅಧಿಕಾರಿಗಳ ಭ್ರಷ್ಟಾಚಾರ ಕಾರಣ ಬಿ ಖಾತೆಯಿಂದ ಎ ಖಾತೆಗೆ ಪರಿವರ್ತನೆ ಯೋಜನೆ ಆಸ್ತಿ ಮಾಲೀಕರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದೆ ಸಕಾಲದಲ್ಲಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಕೈಗೊಳ್ಳುವ ಕ್ರಮವೇನು? | • ಬಿ-ಖಾತೆಯಿಂದ ಎ-ಖಾತೆಗೆ ಪರಿವರ್ತನೆ ಪ್ರಕ್ರಿಯೆಯನ್ನು ಮತ್ತಷ್ಟು ಪಾರದರ್ಶಕ, ತ್ವರಿತ ಹಾಗೂ ಮಾನವ ಹಸ್ತಕ್ಷೇಪ ಕಡಿಮೆ ಇರುವ ರೀತಿಯಲ್ಲಿ ಅನುಷ್ಠಾನಗೊಳಿಸಲು ವಿವಿಧ ತಾಂತ್ರಿಕ ಸುಧಾರಣೆಗಳನ್ನು ಜಾರಿಗೊಳಿಸಲಾಗಿದೆ.<br>• ಅಗತ್ಯ ದಾಖಲೆಗಳು ಪೂರ್ಣವಾಗಿದ್ದು, ಎಲ್ಲಾ ನಿಯಮಗಳು ಹಾಗೂ ಅರ್ಹತಾ ಮಾನದಂಡಗಳನ್ನು ಪೂರೈಸಿರುವ ಪ್ರಕರಣಗಳನ್ನು ಸ್ವಯಂ ಅನುಮೋದನೆ (Auto Approval) ಮೂಲಕ ವಿಲೇವಾರಿ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.<br>• ಇದರಿಂದ ಅರ್ಜಿಗಳ ವಿಲೇವಾರಿಯಲ್ಲಿ ವಿಳಂಬ ಕಡಿಮೆಯಾಗುವುದರೊಂದಿಗೆ, ನಾಗರಿಕರಿಗೆ ನಿಗದಿತ ಅವಧಿಗಿಂತಲೂ ಶೀಘ್ರವಾಗಿ ಸೇವೆ ದೊರೆಯಲಿದ್ದು, ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹೆಚ್ಚಾಗಿ ಅನಗತ್ಯ ಮಾನವ ಹಸ್ತಕ್ಷೇಪ ಹಾಗೂ ಭ್ರಷ್ಟಾಚಾರಕ್ಕೆ ಅವಕಾಶವನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ. |

**ಸಂಖ್ಯೆ:ನಅಇ 279 ಬಿಬಿಎಸ್ 2026**

**(ಕೃಷ್ಣ ಬೈರೇಗೌಡ)**
**ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು**

ಅನುಬಂಧ-1

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 448 (593)

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿರುವ ಸ್ವತ್ತುಗಳು ಮತ್ತು ಬಿ-ಖಾತಾ ಸ್ವತ್ತುಗಳ ವಿವರಗಳು

| | [illegible] ದಿನಾಂಕ | 18-08-2026 |
|---|---|---|
| ನಗರ ಪಾಲಿಕೆ | ಒಟ್ಟು ಸ್ವತ್ತುಗಳ ಸಂಖ್ಯೆ | ಬಿ-ಖಾತಾ ಸ್ವತ್ತುಗಳ ಸಂಖ್ಯೆ |
| ಬೆಂಗಳೂರು ಕೇಂದ್ರ ನಗರ ಪಾಲಿಕೆ | 259381 | 21540 |
| ಬೆಂಗಳೂರು ಪೂರ್ವ ನಗರ ಪಾಲಿಕೆ | 474001 | 254338 |
| ಬೆಂಗಳೂರು ಉತ್ತರ ನಗರ ಪಾಲಿಕೆ | 475639 | 173432 |
| ಬೆಂಗಳೂರು ದಕ್ಷಿಣ ನಗರ ಪಾಲಿಕೆ | 475531 | 195649 |
| ಬೆಂಗಳೂರು ಪಶ್ಚಿಮ ನಗರ ಪಾಲಿಕೆ | 587804 | 205016 |
| ಒಟ್ಟು ಸ್ವತ್ತುಗಳ ಸಂಖ್ಯೆ | 2272356 | 849975 |

Joint Commissioner(Revenue)
Greater Bengaluru Authority

## ಅನುಬಂಧ-2

| ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 448 (593) | | | | |
|---|---|---|---|---|
| ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿರುವ ಸ್ವತ್ತುಗಳು ಮತ್ತು ಬಿ-ಖಾತಾ ಸ್ವತ್ತುಗಳ ವಿವರಗಳು | | | | |
| | | | ವರದಿಯ ದಿನಾಂಕ | 14-08-2026 |
| ನಗರ ಪಾಲಿಕೆ | ನಾಗರಿಕರಿಂದ ಸಲ್ಲಿಸಲಾದ ಅರ್ಜಿಗಳು | ಅನುಮೋದಿತ | ತಿರಸ್ಕೃತ | ಬಾಕಿ |
| ಬೆಂಗಳೂರು ಕೇಂದ್ರ ನಗರ ಪಾಲಿಕೆ | 304 | 90 | 19 | 195 |
| ಬೆಂಗಳೂರು ಪೂರ್ವ ನಗರ ಪಾಲಿಕೆ | 9,163 | 4,692 | 790 | 3,681 |
| ಬೆಂಗಳೂರು ಪಶ್ಚಿಮ ನಗರ ಪಾಲಿಕೆ | 13,624 | 7,065 | 497 | 6,062 |
| ಬೆಂಗಳೂರು ಉತ್ತರ ನಗರ ಪಾಲಿಕೆ | 13,356 | 7,528 | 675 | 5,153 |
| ಬೆಂಗಳೂರು ದಕ್ಷಿಣ ನಗರ ಪಾಲಿಕೆ | 10,641 | 5,590 | 1,067 | 3,984 |
| ಒಟ್ಟು | **47,088** | **24,965** | **3,048** | **19,075** |

Joint Commissioner(Revenue)
Greater Bengaluru Authority

**ಅನುಬಂಧ**

**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ ಎಂ. ಗೌಡ (ಪದವೀಧರರ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 448 (593)**

**ವಿಷಯ: ಮಾರ್ಗಸೂಚಿ ಮೌಲ್ಯದ (Guidance Value) ಶೇ. 5ರ ದರದಲ್ಲಿ, ಹಾಗೂ ಶೇ. 2ರ ದರದಲ್ಲಿ, ಏಕ ನಿವೇಶನ ಅನುಮೋದನೆ ಶುಲ್ಕವನ್ನು, ಪಾವತಿಸಿ ಬಿ-ಖಾತೆಯಿಂದ ಎ-ಖಾತೆಗೆ ಪರಿವರ್ತನೆ ಮಾಡಿಕೊಂಡಿರುವ ಆಸ್ತಿಗಳ ವಿವರ**

| | | | ವರದಿಯ ದಿನಾಂಕ | 18-08-2026 |
|---|---|---|---|---|
| **ನಗರ ಪಾಲಿಕೆ** | **ಮಾರ್ಗಸೂಚಿ ಮೌಲ್ಯದ ಶೇ.2% ಪಾವತಿಸಿರುವ ಆಸ್ತಿ/ ಸ್ವತ್ತುಗಳ ಸಂಖ್ಯೆ** | **ಸಂಗ್ರಹವಾಗಿರುವ ಮೊತ್ತ** | **ಮಾರ್ಗಸೂಚಿ ಮೌಲ್ಯದ ಶೇ.5% ಪಾವತಿಸಿರುವ ಆಸ್ತಿ/ ಸ್ವತ್ತುಗಳ ಸಂಖ್ಯೆ** | **ಸಂಗ್ರಹವಾಗಿರುವ ಮೊತ್ತ** |
| ಬೆಂಗಳೂರು ಕೇಂದ್ರ ನಗರ ಪಾಲಿಕೆ | 54 | 12743796.08 | 3 | 648016.3 |
| ಬೆಂಗಳೂರು ಪೂರ್ವ ನಗರ ಪಾಲಿಕೆ | 2794 | 701515667.56 | 145 | 81885642.35 |
| ಬೆಂಗಳೂರು ಉತ್ತರ ನಗರ ಪಾಲಿಕೆ | 4615 | 843818683.13 | 342 | 112426971.4 |
| ಬೆಂಗಳೂರು ದಕ್ಷಿಣ ನಗರ ಪಾಲಿಕೆ | 3357 | 718145852.34 | 111 | 45399127.08 |
| ಬೆಂಗಳೂರು ಪಶ್ಚಿಮ ನಗರ ಪಾಲಿಕೆ | 4550 | 841540692.16 | 176 | 61317069.59 |
| **ಒಟ್ಟು** | **15370** | **3117764691.27** | 777 | 301676826.7 |

Joint Commissioner(Reven:
Greater Bengaluru Authority